

## ಚೀನಾ ರಿಹರ್ಸಲ್

‘ಚೀನಾ ಜೈತ್ರಯಾತ್ರೆ’ (ಸೆ. 21, ಇ.ಎಸ್. ಸುಧೀಂದ್ರ ಪ್ರಸಾದ್) ಮುಖಪುಟ ಲೇಖನ ಸಮಕಾಲೀನ ಸಂಗತಿ ಮೇಲೆ ಬೆಳಕು ಚೆಲ್ಲಿದೆ. ನಂಬರ್ 1 ಪಟ್ಟಕ್ಕೇರಲು ಚೀನಾ ಮಾಡುತ್ತಿರುವ ಕಸರತ್ತುಗಳನ್ನು ವಿಸ್ತೃತವಾಗಿ ತಿಳಿಸಿದೆ. ಅಭಿವೃದ್ಧಿ ಮಂತ್ರ ಜಪಿಸುತ್ತಿರುವ ಚೀನಾ, ಅದಕ್ಕಾಗಿ ಮಾಡಿಕೊಳ್ಳುತ್ತಿರುವ ತಯಾರಿ, ಆ ಕಾರಣವಾಗಿ ಆರಿಸಿಕೊಂಡ ಕ್ಷೇತ್ರಗಳ ಕುರಿತ ಸಂಪೂರ್ಣ ಮಾಹಿತಿಯನ್ನು ಒದಗಿಸಿದೆ. ವಿಜ್ಞಾನ, ತಂತ್ರಜ್ಞಾನದಲ್ಲಿ ಪಾರಮ್ಯ ಸಾಧಿಸಿ, ‘ಸೂಪರ್ ಪವರ್’ ಮುಕುಟ ಪಡೆಯಲು ಚೀನಾ ಹವಣಿಸುತ್ತಿರುವುದು, ದೊಡ್ಡ ಸ್ಪರ್ಧೆಗೆ ರಿಹರ್ಸಲ್‌ನಂತೆ ಕಾಣುತ್ತಿದೆ.

—ಹರ್ಷವರ್ಧನ್ ಎಸ್., ಬೆಂಗಳೂರು

## ಆಲ್ಝೈಮರ್‌ಗೆ ಮಾರ್ಗದರ್ಶಿ

‘ಮರೆಗುಳಿತನ; ಜೀವನಶೈಲಿ ಬದಲಾವಣೆಯೇ ಜಾಣತನ’ (ಸೆ. 21, ಉಮಾ ಅನಂತ್) ಆರೋಗ್ಯ ಲೇಖನ ಉತ್ತಮ ಅಂಕಿ ಅಂಶಗಳು ಮತ್ತು ಮಾಹಿತಿಗಳಿಂದ ಕೂಡಿದೆ. ಇಂದು ಸಾವಿರಾರು ಹಿರಿಯ ನಾಗರಿಕರು ಬಳಲುತ್ತಿರುವ ಅಲ್ಝೈಮರ್ ಸಮಸ್ಯೆಗೆ ಉತ್ತಮ ಮಾರ್ಗದರ್ಶಿಯಂತಿದೆ. ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರಾರಂಭವಾದ ಮೆದುಳು ಸಂಶೋಧನಾ ಕೇಂದ್ರದಲ್ಲಿ ಅಲ್ಝೈಮರ್ ಡಿಮೆನ್ಶಿಯಾ ಹಾಗೂ ಪಾರ್ಕಿನ್ಸನ್ ಬಗ್ಗೆ ಅತ್ಯುತ್ತಮ ಸಂಶೋಧನೆ ನಡೆಯುತ್ತಿದೆ. ಸಮಸ್ಯೆ ಇರುವವರು ಕೇಂದ್ರವನ್ನು ಸಂಪರ್ಕಿಸಬಹುದು.

—ಎಂ.ಆರ್. ಚಂದ್ರಶೇಖರ್, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು

## ಮಕ್ಕಳನ್ನು ಕೂಪಕ್ಕೆ ತಳ್ಳಬೇಡಿ

‘ಮೊಬೈಲ್ ಗುಮ್ಮನ ಕರೆಯದಿರಿ, ಅಮ್ಮಾ...’ (ಸೆ. 21, ಸವಿತಾ ಮಾಧವ ಶಾಸ್ತ್ರಿ, ಗುಂಡ್ಮಿ) ಸಮಕಾಲೀನ ಲೇಖನ ಈ ಕಾಲದ ಬಹುಮುಖ್ಯ ಸಮಸ್ಯೆಯನ್ನು ತೆರೆದಿಟ್ಟಿದೆ. ಪುಟ್ಟ ಮಕ್ಕಳಿರುವಾಗಲೇ ಅವರಿಗೆ ಮೊಬೈಲ್ ಚಟ ಹಿಡಿಸಿ ಆನಂತರ ಅದರಿಂದ ಅವರನ್ನು ಹೊರತರಲಾಗದೇ, ಮಕ್ಕಳ ಮೇಲೇ ಗೂಬೆ ಕೂರಿಸುವ ಪೋಷಕರಿಗೆ ಪಾಠದಂತಿದೆ. ಪುಟ್ಟ ಮಕ್ಕಳು ಮನೆಯಲ್ಲಿದ್ದವರನ್ನು ನೋಡಿ ಕಲಿಯುವುದೇ ಹೆಚ್ಚು. ಎಲ್ಲರೂ ಮೊಬೈಲ್ ನೋಡಿಕೊಂಡು ಕುಳಿತಿರುವಾಗ ಆ ಮಕ್ಕಳು ಬೇರೇನನ್ನು ಕಲಿಯಲು ಸಾಧ್ಯ? ಮಕ್ಕಳನ್ನು ಹೀಗೆ ಕೂಪಕ್ಕೆ ತಳ್ಳುವುದು ಎಷ್ಟು ಸರಿ? ಇದನ್ನು ಎಲ್ಲ ತಂದೆ ತಾಯಿಯರೂ ಯೋಚಿಸಬೇಕು.

— ಶ್ರೀಧರಮೂರ್ತಿ ಎಸ್., ಶಿವಮೊಗ್ಗ

## ವಿಶ್ವಕಪ್ ಹೆಜ್ಜೆಗುರುತು

‘ವಿಶ್ವಕಪ್ ಕ್ರಿಕೆಟ್‌ಗೆ ಅಂಚೆಚೀಟಿ ಮೊಹರು’ (ಸೆ. 21, ನಾಗೇಶ್ ಶೆಣೈ) ಲೇಖನ ಸಂಗ್ರಹಯೋಗ್ಯ. ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಗಳ ಸಂದರ್ಭ ವಿವಿಧ ದೇಶಗಳು ಬಿಡುಗಡೆ ಮಾಡಿದ ಅಂಚೆಚೀಟಿಗಳನ್ನು, ವಿವರಗಳೊಂದಿಗೆ ನೀಡಿರುವುದು ಪೂರಕವಾಗಿದೆ.

— ಲಕ್ಷ್ಮೀಪತಿ ಎಸ್.ಆರ್., ಮೈಸೂರು

## ಸುಂದರ ಚಿತ್ರಪಟ ಕಥನ

‘ಕ್ಷಮಾ ಪಕ್ಷಿಪ್ರಪಂಚ’ (ಸೆ. 21, ಮಂಜುಶ್ರೀ ಕಡಕೋಳ) ಚಿತ್ರಪಟ ಕಥನ ಹಾಗೂ ಚಿತ್ರಗಳು ತುಂಬಾ ಚೆನ್ನಾಗಿವೆ. ಪಕ್ಷಿಪ್ರಪಂಚದ ಬೆರಗುಗಳು ಲೇಖನದಲ್ಲಿ ಕಂಡವು. ಕ್ಷಮಾ ಗಿರೀಶ್ ಫೋಟೊಗ್ರಫಿಯಲ್ಲಿ ಇನ್ನೂ ಎತ್ತರದ ಮಟ್ಟ ತಲುಪಿ ದೊಡ್ಡ ಹೆಸರು ಮಾಡಲಿ ಎಂಬುದು ನನ್ನ ಹಾರೈಕೆ.

—ಅನುರಾಧ, ಬೆಂಗಳೂರು



## ಆಹಾ ಕೀಡಾ ಬಜಾರ್!

‘ಹುಳ–ಹುಪ್ಪಟೆ ಖಾದ್ಯಗಳ ಕೀಡಾ ಬಜಾರ್’ (ಸೆ. 21, ಆನಂದತೀರ್ಥ ಪ್ಯಾಟಿ) ಆಹಾರ ಸಂಸ್ಕೃತಿಯ ಲೇಖನ ನಾಗಾಲ್ಯಾಂಡಿನ ಬುಡಕಟ್ಟು ಸಮುದಾಯಗಳ ವಿಶಿಷ್ಟ ಆಹಾರ ಪದ್ಧತಿಯನ್ನು ಪರಿಚಯ ಮಾಡಿಕೊಟ್ಟಿತು. ಪ್ರಾಣಿ–ಪಕ್ಷಿ–ಕೀಟಗಳ ಮಾರಾಟ ಹಾಗೂ ಖರೀದಿಯ ತಾಣ ‘ಕೀಡಾ ಬಜಾರ್’ನ ಚಿತ್ರಣವನ್ನು ಲೇಖಕರು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ವಿಭಿನ್ನ ಆಹಾರ ಸಂಸ್ಕೃತಿಯೊಂದನ್ನು ನೋಡಿದಂತಾಯಿತು.

—ಸರೋಜಾ ಎಸ್.ಎನ್., ಹಾಸನ

## ಎಲ್ಲ ಅವ್ವಂದಿರ ಕಥೆ

‘ಇದು ಕಥೆಯಲ್ಲ ಜೀವನ’, (ಸೆ. 21, ವಸುಮತಿ ಉಡುಪ) ಪ್ರತಿಯೊಬ್ಬ ತಾಯಿಯ ಜೀವನವನ್ನು ಕಣ್ಣಮುಂದೆ ಸುರುಳಿ ಸುರುಳಿಯಾಗಿ ಬಿಡಿಸಿಟ್ಟಿತು. ಯೌವನದಲ್ಲಿ ಗಂಡ ಮಕ್ಕಳನ್ನು ಸಂಭಾಳಿಸುತ್ತಾ, ಇವತ್ತು ಸುಖ ಸಿಗುತ್ತದೆ, ನಾಳೆ ಸುಖ ಸಿಗುತ್ತದೆ ಎಂದು ಯೋಚಿಸುತ್ತಲೇ ತನಗರಿವಿಲ್ಲದಂತೆ ಎಲ್ಲವನ್ನೂ ಮೈಮೇಲೆ ಎಳೆದುಕೊಂಡು ದುಡಿಯುತ್ತಲೇ ಸಾಗುತ್ತಾಳೆ. ದುಡಿಮೆಗೆ ಪ್ರಶಂಸೆಯ ಮಾತಿರಲಿ, ಅದು ಹಾಗೆ ಮಾಡಬಾರದಿತ್ತು, ಇದು ಹೀಗೇಕೆ ಮಾಡಿದೆ? ಎಂಬಿತ್ಯಾದಿ ಮಾತುಗಳನ್ನು ಕೇಳಿಯೂ ಸುಮ್ಮನಿರುತ್ತಾಳೆ. ಅವಳು ಸುಖಪಡುವ ದಿನ ಬರುವುದೇ ಇಲ್ಲ. ಎಲ್ಲರನ್ನೂ ಸಾಕಿ




ಸಲುಹಿದವಳು ಕೊನೆಗೆ ಒಂಟಿಯಾಗಿ ನಿಲ್ಲುವ ಅಸಹಾಯಕತೆ ಅನುಭವಿಸುವ ಜೀವ ಅದು. ಕಥೆ ಓದಿ ನನಗೆ ನನ್ನವ್ವನ ನೆನಪಾಯಿತು. ಎಂಟು ಮಕ್ಕಳನ್ನು ಹೊತ್ತು ಹೆತ್ತು ಸಾಕಿದ್ದಲ್ಲದೆ ಹತ್ತು ಮೊಮ್ಮಕ್ಕಳನ್ನು ಸಾಕಿದಳು. ಎಲ್ಲ ಅವ್ವಂದಿರ ಪಾಡಿನ ಕಥೆ ಕಣ್ಣೆವೆಯನ್ನು ಮಂಜು ಮಂಜಾಗಿಸಿತು.

—ಬಿಜೆ ಪಾರ್ವತಿ ವಿ. ಸೋನಾರೆ, ಬೀದರ್

## ನಿಜ ಜೀವನ ದರ್ಶನ

ವಸುಮತಿ ಉಡುಪ ಅವರ ಕಥೆ ತುಂಬಾ ಇಷ್ಟವಾಯಿತು. ಮನಸ್ಸಿನಾಳಕ್ಕೆ ಇಳಿದು ಯೋಚಿಸುವಂತೆ ಮಾಡಿತು. ಸಂಧ್ಯಾ ಪಾತ್ರದೊಂದಿಗೆ ತಾಯಿಯರ ಜೀವನಗಾಥೆಯ ನೈಜ ಚಿತ್ರಣವನ್ನು ಸಹಜ– ಸರಳವಾಗಿ ನಿರೂಪಿಸುವಲ್ಲಿ ಕಥೆ ಯಶಸ್ವಿಯಾಗಿದೆ. ಕಥೆ ಓದುತ್ತಿದ್ದಂತೆ ನಿಜ ಜೀವನವನ್ನೇ ಕಂಡಂತಾಯಿತು. ಎಲ್ಲೂ ಬೇಸರವಿಲ್ಲದಂತೆ ಓದಿಸಿಕೊಂಡು ಹೋಯಿತು. ಕೊನೆಯ ಸಾಲುಗಳನ್ನು ಓದಿದಾಗ ಸಂಧ್ಯಾರವರಿಗೆ ಅನಿಸಿದಂತೆಯೇ ಇಂದಿನ ಬಹುತೇಕ ಹಿರಿಯರಿಗೂ ಅನಿಸಿರುತ್ತದಲ್ಲವೇ ಎಂದು ಮನಸ್ಸು ಮೌನಕ್ಕೆ ಜಾರಿತು.

—ಎ.ಕೆ. ಅನಂತಮೂರ್ತಿ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in